ಬೇಡ... ದಿನಾ ಬೆಳಿಗ್ಗೆ ಬೇಗ ಎದ್ದು ಮನೆಯ ಎಡ ಪಕ್ಕದ ಹಿತ್ತಲಿನ ಕೊಟ್ಟಿಗೆಯಲ್ಲಿ ಹಾಲು ಕರೆಯಲು ಕೂತಾಗ ಹೊಸಬರಿಗೆ ಹಾಲು ಇಳಿಸುವುದಿಲ್ಲ ಅನ್ನುವ ಮುಂದಾಲೋಚನೆಯಲ್ಲಿ ನಮ್ಮ ಮಾವ ಹಸುವಿನ ಗಂಗೆದೊಗಲನ್ನು ನೀವುತ್ತಾ ಕರು ಎಳೆದು ಕಟ್ಟುತ್ತಿದ್ದರೆ ನನ್ನ ಮನಸ್ಸೆಲ್ಲಾ ತೊಟ್ಟಿಮನೆಯ ದೊಡ್ಡ ಹಜಾರದಲ್ಲಿ ಒಂಟಿಯಾಗಿ ಮಲಗಿಸಿ ಬಂದ ಪುಟ್ಟ ಮಗುವಿನ ಮೇಲೇ... ಹಜಾರಕ್ಕೆ ಹೊಂದಿಕೊಂಡ ಎರಡು ಚಿಕ್ಕ ರೂಮುಗಳಲ್ಲಿ ಒಂದರಲ್ಲಿ ಹೊಸತಾಗಿ ಮದುವೆಯಾದ ಮೈದುನನ ಜೋಡಿ ಮಲಗಿದ್ದರೆ ಇನ್ನೊಂದರಲ್ಲಿ ಜಾಂಡೀಸ್‌ನಿಂದ ಬಳಲುತ್ತಿದ್ದ ನನ್ನ ದೊಡ್ಡಮಗಳು ಮಲಗಿರುತ್ತಿದ್ದಳು. ಚಿಕ್ಕವಳ ನಿದ್ದೆ ನಾ ಎದ್ದಾಗಲೇ ಮುಗಿದಿರುತ್ತಿತ್ತು. ಹೀಗಾಗಿ ಆತಂಕದಲ್ಲೇ ಹಾಲು ಕರೆದುಕೊಂದು ಒಳಬಂದರೆ... ಅಷ್ಟರಲ್ಲೇ...

ಒಂದು ಎರಡು ಎಲ್ಲವನ್ನೂ ಮಾಡಿಕೊಂಡು ತಲೆ, ಮೈ, ಮುಖಕ್ಕೆಲ್ಲ ಮೆತ್ತಿಕೊಂಡು ಇಡೀ ಹಜಾರವನ್ನೆಲ್ಲ ಸಾರಿಸಿರುತ್ತಿದ್ದಳು ಈ ನನ್ನ ಮಗಳು..

ಹೀಗೆ ಇಷ್ಟೆಲ್ಲ ರಸ ರೇಜಿಗೆಗಳ ನಡುವೆ ಗಂಟಿ ತಪ್ಪಿಸಿಕೊಂಡಾಗ ನಮ್ಮಪ್ಪನ ಬಳಿ ಕವಡೆಶಾಸ್ತ್ರ ಕೇಳಲು ಬರುವ ಮಂದಿಯ ಗಂಟೀ ಪುರಾಣ... ಶಾಂತಿ ಸಮಾರಾಧನೆಗಳಲ್ಲಿ ಕೊಡುವ ಗೋದಾನ.. ಮಾರಿದ ಹಾಗೂ ದಾನಕೊಟ್ಟ ಆ ಜೀವಿಗಳು ಪುನಃ ತಮ್ಮ ಮೂಲ ನೆಲೆಗೇ ಹಿಂದಿರುಗುವ ಕರುಳು ಹಿಂಡುವ ಕತೆಗಳು... ಜಾನುವಾರುಗಳಿಗೆ ಪ್ರಾಣಾಂತಿಕವಾದ ಮಳಿಬಿಡುವ ಕಾಯಿಲೆ ವಾಸಿಯಾಗುವುದಕ್ಕಾಗಿ ಮೂಗಿನ ಹೊಳ್ಳೆಯೊಳಗೆ ಕಡ್ಡಿ ತೂರಿಸುವ 'ಮುಷ್ಟ' ಮಾಡಿಸಿಕೊಳ್ಳುವಾಗ ಹನಿಗಣ್ಣಾಗಿ ಯಜಮಾನನನ್ನೇ ದಿಟ್ಟಿಸುವ ಮೂಕಜೀವಿಗಳು... ಕಂಬಳದ ಕೋಣಗಳು... ಕೋಲೆ ಬಸವರ ರಾಮ ಸೀತೆಯರು... ಬೆಲ್ಲ ಹಾಗು ಎಣ್ಣೆಗಾಗಿ ಗಾಣ ಸುತ್ತುವ, ಹೇರು ಹೊರುವುದಕ್ಕಾಗಿ ಕಾಲಿಗೆ ಲಾಳ ಕಟ್ಟಿಸಿಕೊಳ್ಳುವ ನಮ್ಮ ಕುಟುಂಬಕ್ಕೆಲ್ಲ ಏಕೈಕ ಲಕ್ಸುರಿ ವಾಹನವಾದ ಸಣ್ಣ ಚಿಕ್ಕಪ್ಪಯ್ಯನ ಮನೆಯ ಕಮಾನು ಗಾಡಿಯ ಜೋಡೆತ್ತುಗಳು... ಗದ್ದೆಯ ಹೆಂಟೆ ಒಡೆಯಲು ಎಳೆಯುತ್ತಿದ್ದ ಗೋರಿಯ ಮೇಲೆ ಸರದಿಯಂತೆ ತಲಾ ಒಬ್ಬೊಬ್ಬರನ್ನೇ ಕೂರಿಸುವ ಹೂಟೆಯಾಳಿನ ಅನೂಹ್ಯ ಉದ್ಗಾರಗಳಿಗೆ ಓಗೊಟ್ಟು ನಮ್ಮನ್ನೆಲಾ ಅನಾಯಾಸವಾಗಿ ಎಳೆದು ಈಗಿನ ಎಸ್ಕಲೇಟರ್‌ಗೆ ಸಮನಾದ ಅನುಭವ ಕೊಡುತ್ತಿದ್ದ ಎತ್ತು ಅಥವಾ ಕೋಣಗಳು... ಮತ್ತು ಮಳೆಗಾಲದುದ್ದಕ್ಕೂ ಒಂದಲ್ಲ ಒಂದು ಕಡೆ ನೇಗಿಲೆಳೆಯಲೇಬೇಕಾದ ತಾಕತ್ತಿಗಾಗಿ ಸೇರುಗಟ್ಟಲೆ ಹುರುಳಿ ಕಾಳನ್ನು ಬೇಯಿಸಲು ಹೇತುವಾಗಿ ತನ್ಮೂಲಕ ನಮಗೆಲ್ಲ ದಿನಾ ಅಮೃತ ಸಮಾನ ಹುರುಳಿಕಟ್ಟಿನ ಸಾರು ಸಿಗುವಂತೆ ಮಾಡುತ್ತಿದ್ದ ಹೂಟೆಯ ಜೋಡಿಗಳು...

ಹೀಗೆ ಹಳ್ಳಿಯ ಬದುಕಲ್ಲಿ ಹುಟ್ಟಿನಿಂದ ಸಾಯುವತನಕವೂ.. ಮಾತ್ರವಲ್ಲ, ಸತ್ತಮೇಲೂ...

ಒಂದೋ ಊರ ಹೊರಗಿರುವ ಕೊರಗರ ಕೊಪ್ಪಕ್ಕೆ ಸುದ್ದಿ ಮುಟ್ಟಿ ಅವರಿಗದರ ಸದುಪಯೋಗ... ಇಲ್ಲ, ಗುಡ್ಡದಲ್ಲೇ ಅನಾಥವಾಗಿ ಸತ್ತುಬಿದ್ದರೆ ರಣಹದ್ದುಗಳಿಗೂ ನರಿ ನಾಯಿಗಳಿಗೂ ಹೊಟ್ಟೆ ತುಂಬ ಆಹಾರ.. ಇನ್ನು, ಹುಲಿ ಹಿಡಿದು ಸತ್ತರೆ ಆ ಹುಲಿಯನ್ನು ವಿಷವಿಕ್ಕಿ ಸಾಯಿಸುವ ಉಪಾಯವಾಗಿ 'ಖಂಡವಿದೆಕೋ, ಮಾಂಸವಿದೆಕೋ' ಅಂತ ಆಹ್ವಾನಿಸಲು ಅದೇ ಕಳೇಬರದ ಮರು ಬಳಕೆ... ಹೀಗೆ ರಾಸುವಿನ ಕುರಿತ ನನ್ನ ಇದುಗಂಟನ್ನೆಲ್ಲ ಬಿಚ್ಚುತ್ತಾ ಹೋದರೆ ಒಂದು ಮಹಾ ರಾಸಾಯಣವೇ ಆದೀತು... ಆದರೂ ಮುಗಿಸುವ ಮುನ್ನ:

ನೆನಪಿನ ಆ ಹಳ್ಳಿ ಈಗ ಸಂಪೂರ್ಣ ಬದಲಾವಣೆಗೊಂಡು ಭತ್ತದ ಗದ್ದೆಗಳೆಲ್ಲ ಅಡಿಕೆ ತೋಟಗಳಾಗಿ, ನಾಡ ಹಸುಗಳ ಬದಲು ಸೀಮೆ ಹಸುಗಳು ಅವತರಿಸಿ, ಸೊಪ್ಪಿನ ಹಟ್ಟಿ ಸಿಮೆಂಟಿನ ಕೊಟ್ಟಿಗೆಯಾಗಿ, ಒಳ ಅಡುಗೆಮನೆಯ ಸೌದೆ ಒಲೆಯ ಜಾಗದಲ್ಲಿ ಗೋಬರ್ ಗ್ಯಾಸ್ ಜೊತೆ